Regd No BG 155

— ಶ್ರೀ —

8—1—1962

Sri "SATYAVADI"
— DAILY —
MYSORE 4
46 th Year

ಸತ್ಯವಾದಿ
SATYAVADI

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
" ಸತ್ಯವಾದಿ " ಪತ್ರಿಕೆಯನ್ನು
ತಪ್ಪದೇ ಓದಿ
ದಿನಪತ್ರಿಕೆ ತಿಂಗಳಿಗೆ 6 ಆಣೆ

Protect the cow

ಸ್ಥಾಪಕರು— ಅರಮನೆ ಸಿಂಸ್ಕೇದಾರ್ ಎಂ. ಎ. ಸುಬ್ಬರಾಯುರು [ಬಿಡಿ ಪ್ರತಿ 3 ಪೈ

ಗೋಸಂರಕ್ಷಣೆ ಮಾಡಿ

80 ಮಿಲಿಯ ಟನ್ ಆಹಾರ ಉತ್ಪತಿ ನಿರೀಕ್ಷೆ

ಎ—

ಪಾಕ್ ಪತ್ರಿಕೆಗಳ ದಾಂಧಲೆ

ನವದೆಹಲಿ 7— ಶನಿವಾರದ ಪಾಕಿಸ್ತಾನ ಪತ್ರಿಕೆಗಳಲ್ಲಿ, ' ಜಲಂಧರಿಗೆ ಸಶಸ್ತ್ರ ಸೇನೆಗಳು ಬಂದಿದೆ ' ' ಭಾರತವು ನಮ್ಮ ಗಡಿಯಲ್ಲಿ ಸೇನೆ ಜಮಾಯಿಸುತ್ತಿದೆ ' ಇತ್ಯಾದಿ ಮಾದರಿ ಹೆಡ್‌ಲೈನುಗಳು ಮುದ್ರಿತವಾಗಿದೆ.

ರಾಕ್ಷಸಾಕಾರದ ಮಗುವಿನ ಜನನ

ತೈಪೈ 6— ಇಲ್ಲಿಯ ಒಬ್ಬ ಚೀನೀ ಅಧಿಕಾರಿಯೊಬ್ಬನ 40 ವರ್ಷದ ಹೆಂಡತಿಯು 15 ಪೌಂಡು ತೂಕದ ರಾಕ್ಷಸಾಕಾರದ ಮಗುವನ್ನು ಹೆತ್ತಳು

ಸಕ್ಕರೆ ಬಿಡುಗಡೆ

ನವದೆಹಲಿ 6— ಭಾರತ ಸರಕಾರವು ಸಕ್ಕರೆ ಕಾರ್ಖಾನೆಗಳಿಂದ ಮಾಂಟಕ್ಕೆ 2 ಲಕ್ಷ ಟನ್ ಸಕ್ಕರೆಯನ್ನು ಬಿಡುಗಡೆ ಮಾಡಿದೆ ಎಂದು ಪ್ರಕಟವಾಗಿದೆ

ಎಚ್ಚರಿಕೆ ನುಡಿ

ಶ್ರೀ ಕೃಷ್ಣಪುರಿ 7— ಭಾರತದಲ್ಲಿ ವಿಶ್ವ ಪೋಷಕ ಗೀಸು ಸ್ವಾಸ್ಥ್ಯವನ್ನು ಮತ್ತೆ ಸ್ಥಾಪಿಸಲು ಪ್ರಯತ್ನಗಳು ನಡೆದರೆ ವಿಶ್ವ ಅಂದೋಳನವಾಗುವುದೆಂದು ಪಂ || ನೆಹರೂ ನುಡಿದರು.

ಸಂಪೂರ್ಣ ತಮಿಳು

ಮದರಾಸು 6— ದ್ರವಿಡ ಕಜಗಂ ಪ್ರತ್ಯೇಕ ತಮಿಳುನಾಡಿನ ಸ್ಥಾಪನೆಗಾಗಿ ಶ್ರಮಿಸುವುದೆಂದೂ ಆ ರಾಜ್ಯದ ಎಲ್ಲಾ ಇಲಾಖೆಗಳಲ್ಲೂ ತಮಿಳನ್ನೇ ಶೈಕ್ಷಣದಲ್ಲೇ ನಡೆಯುವ ದಿನಕ್ಕಾಗಿ ಕಾರ್ಯ ಮಾಡುವುದೆಂದೂ ಶನಿವಾರ ನಡೆದ ಸಮ್ಮೇಳನದಲ್ಲಿ ನಿರ್ಣಯ ಮಾಡಲಾಯಿತು.

ಸ್ವತಂತ್ರ ಪಾರ್ಟಿ ಮೇಲೆ ಟೀಕೆ

ಶ್ರೀ ಕೃಷ್ಣಪುರಿ 6— ಸ್ವತಂತ್ರ ಪಾರ್ಟಿಯನ್ನು ' ಹಲಿಕಾಪ್ಟರು ಪಾರ್ಟಿ ' ಎಂದು ಪಂ || ನೆಹರು ವರ್ಣಿಸಿದರು ; ಬೀಹಾರಿನ ನಾನಾ ಭಾಗಗಳಲ್ಲಿ ಸ್ವತಂತ್ರ ಪಾರ್ಟಿಯು ಏನಾದ ಹಾರಾಡುತ್ತಿದೆಯೆಂದೂ, ನಮಗೆ ಅದಿಲ್ಲವೆಂದೂ, ಸ್ವತಂತ್ರ ಪಾರ್ಟಿ ವಿರೋಧಿಗಳಿಗೆ ಜನ ಬಂದಿರುವುದರಿಂದ ಅವರು ಹೀಗೆ ಹಾರಾಡಿ ಸುತ್ತಿರುವರೆಂದೂ ಪಂ || ನೆಹರು ಅಲ್ಲಗಳೆದರು.

ದೆಹಲಿಯಲ್ಲಿ ನಡೆದ ಮಹಾಯಾಗ

ನವದೆಹಲಿ— ಬರುವ ತಿಂಗಳಲ್ಲಾಗುವ ಅಶ್ವಗ್ರಹ ಕೂಟದಿಂದುಂಟಾಗುವ ವಿಪತ್ತುಗಳಿಂದ ವಿಶ್ವವನ್ನು ರಕ್ಷಿಸಲು 15ದಿನಗಳಿಂದ ಇಲ್ಲಿ ನಡೆಯುತ್ತಿದ್ದು ಶುಕ್ರವಾರ ಪೂರ್ಣಾಹುತಿ ಸಮಾರಂಭದೊಡನೆ ಮುಕ್ತಾಯಗೊಂಡಿತು: ದೇಶದ ನಾನಾ ಭಾಗಗಳಿಂದ ಬಂದ 700 ಮಂದಿ ಸಾಧುಗಳು ದೇವರ ಅನುಗ್ರಹಕ್ಕಾಗಿ ಜಮುನಾ ತೀರದಲ್ಲಿ ಪ್ರಾರ್ಥನೆ ಸಲ್ಲಿಸುತ್ತಿದ್ದರು : ಯಾಗದ ಕಾಲದಲ್ಲಿ ಗಾಯತ್ರಿ ಮಂತ್ರವು 2 ಕೋಟಿ ಸಾರಿ ಪಠಿಸಲ್ಪಟ್ಟಿತು ; ಪವಿತ್ರ ಅಗ್ನಿಯಲ್ಲಿ 18 ಲಕ್ಷ ಸಾರಿ ಮಂತ್ರೋಚ್ಚಾರಣೆಯೊಡನೆ ಸಮರ್ಪಿಸಲಾಯಿತು ; ಯಾಗಕ್ಕೆ ಸುಮಾರು ಮೂರು ಲಕ್ಷ ರೂಗಳಷ್ಟು ವ್ಯಯವಾಗಿರುವುದೆಂದು ಅಂದಾಜುಮಾಡಲಾಗಿದೆ.

———

ನವದೆಹಲಿ 7 — ಇಂದು ವಿಶ್ವದಲ್ಲಿಯಾವ ಸಹಕಾಲಿಕ ರಾಜಕೀಯ ನೇತ್ರರಿಗೂ ಪಂ || ನೆಹರೂರವರಿಗಿಂತ ಹೆಚ್ಚು ಘನತೆ ಹೊಂದಿರುವುದಿಲ್ಲವೆಂದು ಡೆನ್ಮಾರ್ಕಿನ ಪ್ರಧಾನಿ ವಿಗ್ಗೋ ಕಂಪೆಮೈ ಹೇಳಿರುವರು.

ಏ ಐ ಸಿ ಸಿ ಅಧಿವೇಶನದಲ್ಲಿನ ಊಟ

ಶ್ರೀಕೃಷ್ಣಪುರಿ 7 — ಕಾಂಗ್ರೆಸ್ಸು ಅಧಿವೇಶನದಲ್ಲಿ ಜನರಲ್ ಅಡಿಗೇ ಮನೆಯಿಂದ 50 ಸಾವಿರ ಊಟಗಳು ಹಾಕಲಾಯಿತು ; ಈ ಅಡಿಗೆಯು ಪ್ರತಿನಿಧಿಗಳು, ಏ ಐ ಸಿ ಸಿ ಮೆಂಬರುಗಳು, ವಾಲಂಟಿಯರುಗಳು ವಗೈರೆ ಎಲ್ಲರಿಗೆ ಸಾಕಾಗಿ .... ಇದು ಕಲ್ಕತ್ತಾ ಮಾರ್ವಾಡಿ ರಿಲೀಫು ಸೊಸೈಟಿಯಿಂದ ಸಡೆಸಲಾಯಿತು .... 300 ಮಣ ಅಕ್ಕಿ, 400 ಮಣ ಗೋಧಿ ಹಿಟ್ಟು, 120 ಮಣ ಬೇಳೆಗಳು, 500 ಮಣ ತರಕಾರಿ 160 ಮಣ ಸಕ್ಕರೆ 150 ಮಣ ತುಪ್ಪ ಖರ್ಚಾದವು .... ಅಡಿಗೆ ಮಾಡುವುದು ಮಾತ್ರ, ಒಡಿಸುವುದಕ್ಕೆ 110 ಮಂದಿ ಅಡಿಗೆಯವರು ಮತ್ತು ಅವರ ಸಹಾಯಕರು ಮತ್ತು 450 ಮಂದಿ ವಾಲಂಟಿಯರುಗಳು ನಿರ್ವಹಿಸಿದರು.

ಚುನಾವಣೆ ವಿಷಯಗಳು

ನವದೆಹಲಿ 6— ಬರುವ ಮಹಾ ಚುನಾವಣೆಯಲ್ಲಿ 1 ಪೋಲಿಂಗು ಸ್ಟೇಷನ್ನಿಗೆ 1000 ಮಂದಿ ಮೋಟರಿಗಿಂತ ಹೆಚ್ಚು ಇರುವುದಿಲ್ಲ — ಪೋಲಿಂಗು ಸ್ಟೇಷನ್ನನ್ನು ಗಣ್ಯ ವ್ಯಕ್ತಿಗಳ ಪೂಜಾಸ್ಥಾನಗಳಲ್ಲಿ ಇಡುವುದಿಲ್ಲ — ಮೋಟರು ಪೋಲಿಂಗು ಸ್ಟೇಷನ್ನಿಗೆ ಬರುವುದು 3 ಮೈಲಿಗಳಿಗಿಂತ ಹೆಚ್ಚು ದೂರವಿರುವುದಿಲ್ಲ — ಪೋಲಿಂಗು ಸ್ಟೇಷನ್ನುಗಳನ್ನು ಉಮೇದುವಾರರ ಅಥವಾ ಅವರ ಹಿತಚಿಂತಕರುಗಳ, ಅಥವಾ ರಾಜಕೀಯ ಪಕ್ಷಗಳ ಪ್ರಮುಖರ ಮತ್ತು ಚಟುವಟಿಕೆ ಸದಸ್ಯರ ನಿವಾಸದಲ್ಲಿಡುವುದಿಲ್ಲ — ಅತ್ಯಾವಶ್ಯಕವಾದ ಕಡೆ ಪುರುಷರ ಮತ್ತು ಸ್ತ್ರೀಯರ ಪೋಲಿಂಗು ಸ್ಟೇಷನ್ನುಗಳನ್ನು ಪ್ರತ್ಯೇಕವಾಗಿಡಲಾಗುವುದು.

★

ಪಂಜಿಂ 6— ಗೋವಾದಲ್ಲಿ ಪೋರ್ಚುಗೀಸರು ವಿಧಿಸಿದ್ದ ಎಲ್ಲ ಮಿಲಿಟರಿ ಕೆಂದಾಯಗಳೂ ತೆಗೆದುಹಾಕಲ್ಪಟ್ಟವು.

ಕಲ್ಕತ್ತ 7— ಈ ವರ್ಷ 80 ಮಿಲಿಯ ಟನ್ ಧಾನ್ಯ ಉತ್ಪತ್ತಿಯಾಗುವಂತಿದೆ ಎಂದು ಕೇಂದ್ರ ಆಹಾರ ಮಂತ್ರಿಯವರು ತಿಳಿಸಿರುವರು.

೦೦

ಮೈಸೂರು ರಾಮಾನುಜ ರಸ್ತೆಯಲ್ಲಿರುವ ಜಗದ್ಗುರು ಶ್ರೀ ಶಿವರಾತ್ರೀಶ್ವರ ವಿದ್ಯಾಪೀಠದಲ್ಲಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಜಯಂತಿ ಮಹೋತ್ಸವ ಸಪ್ತಾಹದ ಆರಂಭೋತ್ಸವ ಮೈಸೂರು ಶ್ರೇಷ್ಠ ನ್ಯಾಯಾಧೀಶರಾದ ಶ್ರೀ ನಿ ಟ್ಟೂರು ಶ್ರೀನಿವಾಸರಾವ್‌ರಿಂದ ನೆರವೇರಿಸಲ್ಪಟ್ಟಿತು ಸಚಿವೋತ್ತಮರು ವೀರಸಿಂಹಾಸನಾಧೀಶ್ವರ ಜಗದ್ಗುರು ಪಟ್ಟದ ಶ್ರೀ ಶಿವರಾತ್ರಿ ಮಹಾಸ್ವಾಮಿಗಳು ಅಧ್ಯಕ್ಷತೆ ವಹಿಸಿದ್ದರು. ಮೈಸೂರಿನ ಮಾಜಿ ಶಿಕ್ಷಣ ಮಂತ್ರಿಯವರಾದ ಶ್ರೀ ಎ ಜಿ. ರಾಮಚಂದ್ರರಾಯರು ಧರ್ಮದ ವಿಷಯವಾಗಿ ಭಾಷಣ ಮಾಡಿದರು

ಪಂಜಿಂ 6— ಶಕ್ತಿ, ದಾಡಿಶ, ವೈವಸಾಯ ಮತ್ತು ನೆಶರು— ಇವು ಯೋಜನೆಯ ನಾಲ್ಕು ಕಂಭಗಳು ಎಂದು ಮಾಜಿ ಕಾಂಗ್ರೆಸ್ಸು ಅಧ್ಯಕ್ಷ ಶ್ರೀ ಧೇಬರರು ಹೇಳಿರುವರು.

ಹೈದರಾಬಾದು 6 — 400 ಅಡಿ ಎತ್ತರದ ಚಾರ್ಮಿನಾರ್‌ನಿಂದ ಒಬ್ಬ ಹೆಣ್ಣು ವಯಸ್ಸನ್ನು ಬಿದ್ದು ಕೂಡಲೇ ಸತ್ತು ಹೋದನು ; ದಾರಿಯಲ್ಲಿ ಹೋಗುತ್ತಿದ್ದವನೊಬ್ಬನಿಗೆ ತಗಲಿ ಗಾಯಗೊಂಡು ಆಸ್ಪತ್ರೆಗೆ ಸಾಗಿಸಲ್ಪಟ್ಟು ಕಳವಳಸ್ಥಿತಿಯಲ್ಲಿದಾನೆ ; ಇದು ಆತ್ಮಹತ್ಯೆಯೋ ಅಕಸ್ಮಿಕವೋ ಗೊತ್ತಾಗಿಲ್ಲ.

ನಾಳೆಯ ಪಂಚಾಂಗ

ಅಸ್ಮಾನ ಮಹಾವಿದ್ವಾನ್ ಧರ್ಮಾಧಿಕಾರಿ
ದೈವಜ್ಞಶಿಖಾಮಣಿ
ಪಂಪಶ್ಯಾಮ್ಸ ಜೋಯಿಸರಿಂದ
9 ಮಂಗಳವಾರ ತದಿಗೆ ಧನಿಷ್ಠ
ದೂರ್ವಾಗಣಪತಿ ವ್ರತ

ವಿವಿಧ ವಾರ್ತೆಗಳು

ಪಾಕಿಸ್ತಾನ ಸರ್ಕಾರವು 'ವರ್ಲ್ಡ್ ಇಂಡಿಯಾ' ಎಂಬ ಬೊಂಬಾಯಿನ ಪತ್ರಿಕೆಯ ತನ್ನ ದೇಶಕ್ಕೆ ಬಂದಂತೆ ಪ್ರತಿಬಂಧಿಸಿದೆ.

ತಿರುವಿಂಡ್ರಂ ಕಾರ್ಪೋರೇಷನ್ನಿನ ನಲ್ವತ್ತು ಐದು ಮಂದಿ ಕಾಂಗ್ರೆಸ್ಸು ಸದಸ್ಯರು ಆ ಪಾರ್ಟಿಯನ್ನು ಬಿಟ್ಟರು.

ಬೊಂಬಾಯಿ 6— ಬೊಂಬಾಯಿ ರೇವಿನಲ್ಲಿದ್ದ ಸ್ಟೀಮರು ಒಂದರಿಂದ ಹಕ್ಕುದಾರರಿದ್ದಿಲ್ಲದ ಸುಮಾರು ಒಂದು ಲಕ್ಷ ರೂಗಳ ಪರಿಮಾಣದ 560 ಗಡಿಯಾರಗಳನ್ನು ಕಸ್ಟಮ್ಸ್‌ನವರು ವಶಪಡಿಸಿಕೊಂಡರು.

ಚೆನ್ನೈ ಪಟ್ಟಣದ ಜಾಫರ್‌ಖಾನಿಗಳು ಮುನಿಸಿಪಾಲಿಟಿಯವರು ತಮ್ಮ ಸಂಬಳ ಹೆಚ್ಚಿಸಬೇಕೆಂಬ ಕೇಳಿಕೆಯನ್ನು ನಡೆಸಿಕೊಡದಿರುವುದರಿಂದ, ಜನವರಿ 15 ರಿಂದ ಮುಷ್ಕರ ಹೂಡ ವುದಾಗಿ ನೋಟೀಸು ಕೊಟ್ಟಿರುವರು.

ಮಂಗಳೂರು 6— ಮುಂದಿನ ಮಹಾಚುನಾವಣೆಯಲ್ಲಿ ಶಾಸನ ಸಭೆಗೆ ಸ್ಪರ್ಧಿಸಲು ಚುನಾಯಿಸಲ್ಪಟ್ಟಿರುವ ಕಾಂಗ್ರೆಸ್ಸು ಅಭ್ಯರ್ಥಿ ಶ್ರೀ ಸೂರ್ಯನಾರಾಯಣ ಅಡಿಗರು ಸ್ಪರ್ಧೆಯಿಂದ ವಾಪಸಾಗಿಲು ಇಚ್ಛಿಸಿದ್ದಾರೆಂದು ತಿಳಿಯುಬಂದಿದೆ.

ಗೋವಾವು 6— ಹಿಂದೀ ಮಾತನಾಡುವ ರಾಜ್ಯಗಳು ಮೂರು ಭಾಷಾನಿಯಮವನ್ನು ಕಡ್ಡಾಯವಾಗಿ ಜಾರಿಗೆ ತರಬೇಕೆಂದು ಅರ್ಥಿಕ ಬೆಳವಣಿಗೆ ಸಂಸ್ಥೆಯ ಡೈರೆಕ್ಟರು ಡಾ|| ಕೆ ಆರ್ ವಿ ರಾವ್ ಹೇಳಿರುವರು.

354 ಮಂದಿ ಮಕ್ಕಳು

ಸ್ಯಾಕ್ಸನಿ ಮತ್ತು ಪೋಲೆಂಡಿಗೆ 1676 – 1733 ರಲ್ಲಿ ಅರಸನಾಗಿದ್ದ ಅಗಸ್ಟಸ್‌ನಿಗೆ 354 ಮಂದಿ ಮಕ್ಕಳಿದ್ದರು !

ಅಮೋಘ ದೇಶಭಕ್ತರು

ಸ್ವಾಮಿ ವಿವೇಕಾನಂದರ ಸಹೋದರರಾದ ಡಾ || ದತ್‌ರವರು ಬ್ರಿಟಿಶ್ ಪ್ರಖ್ಯಾತ ಕ್ರಾಂತಿಕಾರಿ ನಾಯಕರಾಗಿದ್ದರು ; ಇವರು 2 ವರ್ಷಗಳ ಹಿಂದೆ ಸ್ವರ್ಗಸ್ಥರಾದರು : ಭಾರತ ಸ್ವಾತಂತ್ರ್ಯ ಚಳುವಳಿಯಲ್ಲಿ ಅವರು ಮಾಡಿದ ಅಮೋಘ ಸೇವೆ ಮತ್ತು ತ್ಯಾಗಕ್ಕಾಗಿ ಅವರಿಗೆ ಪಶ್ಚಿಮ ಬಂಗಾಳದ ಸಂಕ್ರಾಂವು ಪೆನ್ಷನ್ ಕೊಡುವುದಾಗಿ ತಿಳಿಸಿದರು : ಆದರೆ ಅವರು ತೆಗೆದುಕೊಳ್ಳಲು ಒಪ್ಪಲಿಲ್ಲ

ಭಾರತದಲ್ಲಿ ಕೈಗಡಿಯಾರ ತಯಾರಿಕಾ ಕಾರ್ಖಾನೆ

ಇನ್ನೊಂದು ವರ್ಷದಲ್ಲಿ ದೇಶದಲ್ಲಿ ಭಾರಿ ಪ್ರಮಾಣದಲ್ಲಿ ಕೈಗಡಿಯಾರಗಳ ತಯಾರಿಕೆ ಪ್ರಾರಂಭವಾಗುತ್ತದೆ ; ಮಹಿಳೆಯರೂ ಪುರುಷರೂ ಧರಿಸಬಹುದಾದ ಗಡಿಯಾರಗಳು ಅಧಿಕ ಸಂಖ್ಯೆಯಲ್ಲಿ ಮಾರಾಟಕ್ಕೆ ಬರಲಿವೆ : ಇನ್ನೊಂದು ವರ್ಷದಲ್ಲಿ ದಿನಕ್ಕೆ ಸುಮಾರು 150 ಗಡಿಯಾರಗಳಂತೆ ವರ್ಷಕ್ಕೆ 55500 ಗಡಿಯಾರಗಳನ್ನು ತಯಾರಿಸಲಾಂಭಿಸಲಾಗುವುದು ; ಮುಂದೆ ಕ್ರಮಕ್ರಮವಾಗಿ ತಯಾರಿಕೆಯನ್ನು ಹೆಚ್ಚಿಸುತ್ತ ಬರಲಾಗುವುದು ; ಇನ್ನು ಆರು ವರ್ಷಗಳೊಳಗಾಗಿ ಗಂಟೆಗೆ 40 ಕ್ಕೂ ಹೆಚ್ಚಿನ ಸಂಖ್ಯೆಯ ಗಡಿಯಾರಗಳಂತೆ ವರ್ಷಕ್ಕೆ 360000 ಗಡಿಯಾರಗಳನ್ನು ತಯಾರಿಸುವ ಗುರಿಯನ್ನು ಇಟ್ಟುಕೊಳ್ಳಲಾಗಿದೆ ; ಆ ಗುರಿಯನ್ನು ಮುಟ್ಟಿದಾಗ ಭಾರತದಲ್ಲಿ ಗಡಿಯಾರಗಳ ಬಗ್ಗೆ ಇರುವ ಬೇಡಿಕೆಯಲ್ಲಿ ಗಮನಾರ್ಹವಾದ ಪ್ರಮಾಣವನ್ನು ಪೂರೈಸಲು ಸಾಧ್ಯವಾಗುತ್ತದೆ; ಈಗಾಗಲೇ ಆ ಮಾದು ಮಾಡಿಕೊಂಡ ಭಾಗಗಳನ್ನು ಜೋಡಿಸಿ ಗಡಿಯಾರಗಳನ್ನು ತಯಾರಿಸುವ ಕಾರ್ಯ ಆರಂಭವಾಗಿದೆ .... ಗಡಿಯಾರದ ಕಾರ್ಖಾನೆಗಾಗಿ 2-5 ಕೋಟಿ ರೂಗಳ ಹಣ ವೆಚ್ಚವಾಗುವುದೆಂದು ಅಂದಾಜು ಮಾಡಲಾಗಿದೆ .... ಕೈಗಡಿಯಾರದ ಉದ್ಯಮವನ್ನು ಕಟ್ಟಲು ಜಪಾನೀಯರ ಸಹಕಾರದಿಂದ ದೊರೆಯುವ ಅನುಕೂಲ ಅತಿ ಮುಖ್ಯವೆಂದು ಭಾವಿಸಲಾಗಿದೆ .... ಒಂದಾನೊಂದುಕಾಲದಲ್ಲಿ ಭೋಗ ವಸ್ತುವೆಂದು ಪರಿಗಣಿಸಲ್ಪಟ್ಟಿದ್ದ ಹಾಗೂ ಈಗ ಅಗತ್ಯ ವಸ್ತುವಾಗಿ ಪರಿಣಮಿಸಿರುವ ಗಡಿಯಾರದ ಆಮದಿನಿಂದಾಗಿ ದೇಶದಿಂದ ಹೊರಹೋಗುತ್ತಿರುವ ವಿದೇಶೀ ವಿನಿಮಯ ಹಣವನ್ನು ಉಳಿಸಲು ಈ ಕಾರ್ಖಾನೆಯು ನೆರವಾಗುತ್ತದೆ.

ವುಡ್‌ಲ್ಯಾಂಡ್ಸ್ ಜನಪ್ರಿಯ 5 ನೇ ವಾರ

ಜಬ್ ಪಾರ್ ಕಿಸೀಸೆ ಹೋತಾಹೈ

ದೇವ್‌ಆನಂದ್, ಅಶಾ ಪರೇಖ್ ಮುತ್ತಿರ ಪ್ರಖ್ಯಾತ ತಾರೆಯರು ಪಾತ್ರಪರಿಸರವೆ

ಅತ್ಯಂತ ಮನರಂಜನೆಯ ಹಿಂದಿ ಚಿತ್ರ [ದಿನವಹಿ 3 ಪ್ರದರ್ಶನಗಳು

ಅಪೆರಾ— ಜನಭರಿತ 2 ನೇ ವಾರ

ನಾಗಾರ್ಜುನ (ಕನ್ನಡ)

ತಾರಾಗಣ— ರಾಜಕುಮಾರ್, ನಾಗಯ್ಯ, ವಂಚಲಕ್ಷ್ಮಿ, ಹರಿಣಿ, ನರಸಿಂಹರಾಜು

ಕಾಂತಾ ರಾವ್, ರಾಜನಾಲ [ದಿನವಹಿ 3 ಆಟಗಳು]

Help ' The Gorakshana '

ಗೋರಕ್ಷಣ ಪ್ರಾಣಿದಯಾ ಕಾರ್ಯಗಳು ಹೆಚ್ಚಿಚ್ಚಾಗಿ ನಡೆಯಲಿ

" ಗೋರಕ್ಷಣ " ಪತ್ರಿಕೆಗೆ ಬೆಂಬಲಿಗರಾಗಿರಿ



ಅಮೇರಿಕಾಕ್ಕೆ ಭೇಟಿ ಸಂಬಂಧದ ಚಿತ್ರಗಳು

Edited, Printed & Published by the Proprietor, Dharma Prachara Nirata M. S. Krishna Rao. at the Satyavadi Press Chamarajapuram, Mysore 4.